# ಹಾಡುಗಳ ಸಂಗ್ರಹ; ಭಾವಗಳ ಸಂಗಮ!

**ಮನೆಯಲ್ಲಿ ತಾಯಿ ಅಡುಗೆ ಕೆಲಸ ಮಾಡುತ್ತಿರುವಾಗಲೇ ಭಾಗವತಸಾರ ಹಾಗೂ ಕೃಷ್ಣನ ಕುರಿತಾದ ಭಕ್ತಿಗೀತೆ ಬರೆದು ರಾಗ ಸಂಯೋಜನೆಯನ್ನೂ ಮಾಡಿ ಹಾಡುತ್ತಿದ್ದರು. ಈ ಎಲ್ಲ ಹಾಡುಗಳ ಸಂಕಲನವನ್ನು ಮಾಡಿ ಹಿರಿಯ ಸಾಹಿತಿಗಳಾದ ಎನ್.ಕೆ. ಕುಲಕರ್ಣಿ, ವಾಮನ ಬೇಂದ್ರೆ, ಹಾ.ವೆಂ. ಕಾಖಂಡಕಿ ಅವರ ಸಮ್ಮುಖದಲ್ಲಿ ಬಿಡುಗಡೆ ಮಾಡಿದೆವು. ಈ ಹೃದಯಸ್ಪರ್ಶಿ ಸಮಾರಂಭ ಎಂದೆಂದಿಗೂ ಮನದಾಳದಲ್ಲಿ ಹಸಿರು.**

**■ ಮಾಲತೇಶ ಎಂ. ಹುಬ್ಬಳ್ಳಿ**

ಸುಮಾರು 38 ವರ್ಷಗಳ ಹಿಂದಿನ ಮಾತು. ನಾನಾಗ ಬ್ಯಾಂಕೊಂದರ ಹುಬ್ಬಳ್ಳಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೆ. ನಮ್ಮ ಊರು ಹುಬ್ಬಳ್ಳಿ ಹತ್ತಿರದ ಕುಂದಗೋಳ. ನಾನು ದಿನಾಲು ಅಲ್ಲಿಂದ ರೈಲಿನಲ್ಲಿ ಹುಬ್ಬಳ್ಳಿಗೆ ಅಡ್ಡಾಡುತ್ತಿದ್ದೆ.

ನನ್ನ ಮಾತೋಶ್ರಿ ಕೃಷ್ಣಾಬಾಯಿ ಹುಬ್ಬಳ್ಳಿ ಒಬ್ಬ ಗೃಹಿಣಿ. 8ನೇ ತರಗತಿವರೆಗೆ ಶಿಕ್ಷಣ ಪಡೆದಿದ್ದರೂ ತಮ್ಮ ಓದುವ ಹವ್ಯಾಸ ಹಾಗೂ ಅಪಾರ ಅನುಭವದಿಂದ ಒಳ್ಳೆಯ ಜ್ಞಾನ.ಸಂಪಾದಿಸಿದ್ದರು. ಕುಂದಗೋಳ ಅವರ ವಾಸಸ್ಥಳ. ಅಲ್ಲಿ ತಾವು ಅಡುಗೆ ಕೆಲಸ ಮಾಡುತ್ತಿರುವಾಗ ತಾವೇ ರಚಿಸಿ ರಾಗ ಸಂಯೋಜಿಸಿದ ಭಕ್ತಿಗೀತೆಗಳನ್ನು ಹಾಡುತ್ತಿದ್ದರು. ಅವರ ಸುಶ್ರಾವ್ಯ ಕಂಠದಿಂದ ಹೊರಹೊಮ್ಮುತ್ತಿದ್ದ ಒಂದೊಂದು ಹಾಡೂ ಅದ್ಭುತ. ಆ ಎಲ್ಲ ಹಾಡುಗಳು ಪರಮಾತ್ಮನ ಪ್ರೇರಣೆಯಿಂದಲೇ ರಚಿತವಾದವುಗಳೆಂದು ಅವರು ನಂಬಿದ್ದರು. ತ.ಸು. ಶ್ಯಾಮರಾಯರ ವಚನ ಭಾಗವತ ಅವರ ಮೇಲೆ ಬಹಳ ಪ್ರಭಾವ ಬೀರಿತ್ತು. ಆದ್ದರಿಂದಲೇ ಭಾಗವತಸಾರ ಹಾಗೂ ಕೃಷ್ಣನ ಹಾಡುಗಳ ರಚನೆ ಮಾಡಿದರು. ಇವರ ಭಕ್ತಿಗೀತೆಗಳ ಸಂಗ್ರಹದಲ್ಲಿ ಸಂಕ್ಷಿಪ್ತ ರಾಮಾಯಣವಲ್ಲದೆ ವಿವಿಧ ದೇವರ ನಾಮ ಹಾಗೂ ಆಧ್ಯಾತ್ಮ ಸಂದೇಶ ಬೀರುವ ಹಾಡು ಗಳೂ ಇವೆ. ಈ ಎಲ್ಲ ಹಾಡುಗಳನ್ನು ಅವು ಹಾಗೆಯೇ ಬಿದ್ದು ಹೋಗದಿರಲಿ ಎಂದು ನೋಟ್ ಪುಸ್ತಕದಲ್ಲಿ ಬರೆದಿಡುತ್ತಿದ್ದೆ. ಅದನ್ನು ಪುಸ್ತಕ ರೂಪದಲ್ಲಿ ಹೊರತಂದರೆ ಹೇಗೆ ಎಂಬ ವಿಚಾರ ತಲೆಯಲ್ಲಿ ಬಂದು ನನ್ನ ವಿಚಾರವನ್ನು ಧಾರವಾಡದವರಾದ ನನ್ನ ಸಹೋದ್ಯೋಗಿ ಮಿತ್ರ ಹಾ.ವೆಂ. ಕಾಖಂಡಕಿ ಯವರಲ್ಲಿ ಪ್ರಸ್ತಾಪಿಸಿದೆ. ಅವರು ನನ್ನನ್ನು ಆಕಾಶವಾಣಿ ಧಾರವಾಡ ಕೇಂದ್ರದ ಮಾಜಿ ನಿಲಯ ನಿರ್ದೇಶಕ ಹಾಗೂ ಖ್ಯಾತ ಸಾಹಿತಿ ಎನ್ಕೆ ಕುಲಕರ್ಣಿ (ನಾನಿಕಾಕಾ) ಅವರಿಗೆ ನನ್ನನ್ನು ಪರಿಚಯಿಸಿದರು. ಎನ್ಕೆಯವರು ಹಾಡುಗಳನ್ನು ಓದಿ ಖುಷಿಪಟ್ಟು ಮುನ್ನುಡಿ ಬರೆದುಕೊಡಲು ಒಪ್ಪಿಕೊಂಡರು. ಎನ್ಕೆಯವರದು ಬಹಳ ಸರಳ ವ್ಯಕ್ತಿತ್ವ .ಅವರ ಇಂಪಾದ ಕಂಠದಲ್ಲಿ ಆಕಾಶವಾಣಿ ಧಾರವಾಡದ ವಿಚಾರ ದೀಪಿಕೆ, ಗೃಹಗೋಷ್ಠಿ, ಹಾಸ್ಯಲಹರಿ ಮುಂತಾದ ಕಾರ್ಯಕ್ರಮ ಕೇಳುವುದೇ ಒಂದು ಖುಷಿ. ಮಾತೋಶ್ರಿಯವರಿಗೆ ಸಹ ಎನ್ಕೆಯವರ ರೇಡಿಯೊ ಕಾರ್ಯಕ್ರಮ ಹಾಗೂ ಅವರ ಸಾಹಿತ್ಯ ಪ್ರಭಾವ ಬೀರಿದ್ದವು



ಹಾಗೆಯೇ ಕಾಖಂಡಕಿಯವರು ನನ್ನನ್ನು ವರಕವಿ ಬೇಂದ್ರೆಯವರ ಸಾಧನಕೇರಿಯ ಮನೆ ಶ್ರೀಮಾತಾಕ್ಕೆ ಕರೆದುಕೊಂಡು ಹೋಗಿ ಖ್ಯಾತ ಬರಹಗಾರ ವಾಮನ ಬೇಂದ್ರೆಯವರನ್ನು ಪರಿಚಯಿಸಿ ಮಾತೋಶ್ರಿಯವರ ಹಾಡುಗಳನ್ನುತೋರಿಸಿದರು. ಅವರು ಕೂಡಾ ಹಾಡುಗಳನ್ನು ಓದಿ ಖುಷಿಪಟ್ಟು ಪ್ರಸ್ತಾವನೆಯನ್ನು ಬರೆದುಕೊಟ್ಟು ಹರಸಿದರಲ್ಲದೆ ಪುಸ್ತಕಕ್ಕೆ ನಂದಾದೀಪ ಎಂದು ಹೆಸರು ಸೂಚಿಸಿದರು. ಖ್ಯಾತ ಚಿತ್ರಕಲಾವಿದ ಹಾಗೂ ಶಿಕ್ಷಕರಾದ ಸುರೇಶ ಕುಲಕರ್ಣಿ ಅವರು ಮುಖಪುಟ ಚಿತ್ರ ಬರೆದುಕೊಟ್ಟರು. ನಂದಾದೀಪ ಪ್ರಕಟಗೊಂಡಿತು.

ಈ ನಡುವೆ ಮಾತೋಶ್ರಿಯವರಿಗೆ ಕ್ಯಾನ್ಸರ್ ಬಂದು ಆರೋಗ್ಯ ಕ್ಷೀಣಿಸ ತೊಡಗಿತು. ಆಗ ನಾನು ಅವರ ಔಷಧೋಪಚಾರಕ್ಕಾಗಿ ಹುಬ್ಬಳ್ಳಿಯಲ್ಲಿ ಬಾಡಿಗೆ ಮನೆ ಹಿಡಿದೆ. ಅವರಿರುವಾಗಲೇ ಪುಸ್ತಕ ಬಿಡುಗಡೆಯ ಸರಳ ಸಮಾರಂಭವನ್ನು ಹುಬ್ಬಳ್ಳಿಯಲ್ಲಿ ನಾನಿದ್ದ ಬಾಡಿಗೆ ಮನೆಯಲ್ಲೇ ಮಾಡಲು ನಿರ್ಧರಿಸಿದೆ. ಅದಕ್ಕಾಗಿ ಎನ್ಕೆ, ವಾಮನ ಬೇಂದ್ರೆ, ಸುರೇಶ ಕುಲಕರ್ಣಿ ಹಾಗೂ ತಾಯಿಯವರಿಗೆ ಚಿಕಿತ್ಸೆ ನೀಡುತ್ತಿದ್ದ ಹುಬಳ್ಳಿಯ ಖ್ಯಾತ ಆಯುರ್ವೇದ ತಜ್ಞ ವೈದ್ಯ ಡಾ.ಕೆ.ಜಿ. ದೇಸಾಯಿಯವರನ್ನು ಆಮಂತ್ರಿಸಿದೆ. ಎಲ್ಲರೂ ಆಮಂತ್ರಣ ಸ್ವೀಕರಿಸಿ ಸಮಾರಂಭಕ್ಕೆ ಹಾಜರಾದರು. ಸಹೋದ್ಯೋಗಿ ಮಿತ್ರ (ಈಗ ಧಾರವಾಡ ಸಾಹಿತ್ಯ ಸಂಭ್ರಮದ ಖ್ಯಾತ ನಿರೂಪಕ ಹಾಗೂ ಬೇಂದ್ರೆ ಪ್ರಶಸ್ತಿ ಪುರಸ್ಕೃತ) ಡಾ.ಹಾ ವೆಂ ಕಾಖಂಡಕಿ ಆ ಪುಟ್ಟ ಕಾರ್ಯಕ್ರಮದ ನಿರೂಪಕರಾಗಿದ್ದರು. ಎನ್ಕೆಯವರು ಮಾತನಾಡುತ್ತಾ ತಾಯಿಯವರನ್ನು ತಮ್ಮ ಮಗಳೆಂದು ಕರೆದು ಅವರ ಕಾವ್ಯ ಪ್ರತಿಭೆಯನ್ನು ಕೊಂಡಾಡಿದರು. ಹಾಗೆಯೇ ವಾಮನ ಬೇಂದ್ರೆಯವರು ತಾಯಿಯವರ ಹಾಡುಗಳ ಬಗ್ಗೆ ವಿಸ್ತಾರವಾಗಿ ವಿಶ್ಲೇಷಿಸಿದರು. ಸುರೇಶ ಕುಲಕರ್ಣಿ, ದೇಸಾಯಿ ಹಾಗೂ ಕಾಖಂಡಕಿಯವರು ಪ್ರಾಸಂಗಿಕ ಮಾತನಾಡಿದರು. ಗೆಳೆಯರು ಹಿರಿಯರು ಹಾಗೂ ಹಿತೈಷಿಗಳ ನಡುವೆ ನಡೆದ ಪುಸ್ತಕ ಬಿಡುಗಡೆ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತಲ್ಲದೆ ಅತ್ಯಂತ ಹೃದಯಸ್ಪರ್ಶಿಯಾಗಿತ್ತು.

ಅಂದು ಮನೆಯಲ್ಲಿ ಸಾಹಿತ್ಯ ದಿಗ್ಗಜರು ಸೇರಿದ್ದು ನನಗೆ ತುಂಬಾ ಖುಷಿ ನೀಡಿತ್ತು. ಈ ಸರಳ ಸಮಾರಂಭ ನನ್ನ ಜೀವನದಲ್ಲಿ ನಡೆದ ಅವಿಸ್ಮರಣೀಯ ಘಟನೆ. ಈ ಸಮಾರಂಭ ಮುಗಿದ ಕೆಲವೇ ತಿಂಗಳಲ್ಲಿ ಮಾತೋಶ್ರೀಯವರು ನಿಧನರಾದರು. ಈಗ ನಾನು ನಿವೃತ್ತಿ ಹೊಂದಿದ್ದು ಮನೆಯಲ್ಲಿದ್ದೇನೆ. ಈಗ ಮುನ್ನುಡಿ ಬರೆದುಕೊಟ್ಟ ಎನ್ಕೆಯವರೂ ಇಲ್ಲ. ವಾಮನ ಬೇಂದ್ರೆಯವರೂ ಇಲ್ಲ, ತಾಯಿಯವರೂ ಇಲ್ಲ. ಆದರೆ ಮನಸ್ಸಿಗೆ ಮುದಕೊಟ್ಟ ಈ ಸರಳ ಸಮಾರಂಭವನ್ನು ಮೆಲುಕು ಹಾಕುತ್ತಾ ನೆನಪಿನ ದೋಣಿಯಲ್ಲಿ ತೇಲುತ್ತಿದ್ದೇನೆ. ■